ಅಧ್ಯಕ್ಷರು: ಪ್ರೋಟೋಕಾಲ್ ಪ್ರೊಸೀಜರ್ ಆ ರೀತಿ ಇದೆ. ನಾನೇನೂ ಅಸಹಾಯಕನಲ್ಲ, ನನಗೆ ಅಂತಹ ಪರಿಸ್ಥಿತಿ ಬಂದಿಲ್ಲ.

ಶ್ರೀ ಸಿ.ಬೈರೇಗೌಡ : ನಾನು ಸಾರ್ವಜನಿಕರ ಪರವಾಗಿ ಒತ್ತಾಯಿಸುತ್ತಿದ್ದೇನೆಂದರೆ, ಮುಳಬಾಗಿಲಿನಲ್ಲಿ ಬಸ್ ನಿಲ್ದಾಣ ಕಾಮಗಾರಿಯನ್ನು ಎಷ್ಟು ಕಾಲಾವಧಿಯಲ್ಲಿ ಕಾರ್ಯಗತಗೊಳಿಸಲಾಗುತ್ತದೆ?

ಶ್ರೀ ಸಿ. ಆರ್.ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ತಮ್ಮ ಬೇಡಿಕೆಯ ಪತ್ರ ನನಗೆ ತಲುಪಿದ್ದು, ಮುಳಬಾಗಿಲಿನಲ್ಲಿ ಬಸ್ ನಿಲ್ದಾಣದ ಕಾಮಗಾರಿ ಪ್ರಾರಂಭಿಸಲು ಜಾಗ ಒದಗಿಸಿಕೊಡುವಂತೆ ಆ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಕಳುಹಿಸಿ ಕೊಟ್ಟಿದ್ದು, ಜಾಗ ಒದಗಿಸಿದ ತಕ್ಷಣವೇ ಬಸ್ ನಿಲ್ದಾಣ ಕಾರ್ಯ ಕೈಗೆತ್ತಿಕೊಳ್ಳುತ್ತೇವೆ.

ಶ್ರೀ ಪಿ.ಜಿ.ಆರ್ ಸಿಂಧ್ಯಾ : ಅಧ್ಯಕ್ಷರೆ, ನಾನು ನಿಮ್ಮ ಸಹಾಯಕ್ಕಾಗಿ ಬರುತ್ತಿದ್ದೇನೆ. ಇದೇ ಉತ್ತರವನ್ನು 1985, 87 ಮತ್ತು 97ನೇ ಇಸವಿಯಲ್ಲೂ ಕೊಡಲಾಗಿದೆ. ಧರ್ಮಸ್ಥಳ ಹಾಗೂ ಬೆಳ್ತಂಗಡಿಯಲ್ಲಿ ಬಸ್ ಡಿಪೋ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡುವುದಾಗಿ ತಿಳಿಸಿರುವುದಕ್ಕೆ ನಾನು ಮಾನ್ಯ ಸಾರಿಗೆ ಸಚಿವರನ್ನು ಅಭಿನಂದಿಸುತ್ತೇನೆ. ನೀವು (ಅಧ್ಯಕ್ಷರು) ಉಪ ಪ್ರಶ್ನೆ ಕೇಳಿದ್ದಕ್ಕೆ ಸಾರಿಗೆ ಸಚಿವರು ಕೊಟ್ಟಿರುವಂಥ ಉತ್ತರವನ್ನು ನಾನು 1985, 87 ಮತ್ತು 97 ರಲ್ಲಿ ಸಾರಿಗೆ ಮಂತ್ರಿಯಾಗಿದ್ದಗಲೂ ಸಹ ಇದೇ ಪ್ರಶ್ನೆ ಬಂದಾಗ ಈಗ ಸಾರಿಗೆ ಮಂತ್ರಿಗಳು ಕೊಟ್ಟಿರುವ ಉತ್ತರವನ್ನೇ ಕೊಡಲಾಗಿದೆ. ಆದುದರಿಂದ, ನಾನು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುವುದೇನೆಂದರೆ, ಮುಳಬಾಗಿಲಿನಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಹಣ ಕೊಟ್ಟು ಜಾಗವನ್ನು ಪಡೆಯುವುದಕ್ಕೆ ಕ್ರಮ ಕೈಗೊಳ್ಳಬೇಕು.

ಅಧ್ಯಕ್ಷರು: ಜಾಗ ಪಡೆಯಲು ಹಣವೇನೂ ಕೊಡಬೇಕಾಗಿಲ್ಲ, ಅದು ಸರ್ಕಾರಕ್ಕೆ ಸೇರಿರುವಂಥ ಜಮೀನಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅಲ್ಲಿ ಕೆರೆ ಇರುವ ಜಾಗವನ್ನು ಕೊಡುತ್ತಾರೆ, ಅದು ಉಪಯೋಗವಿಲ್ಲ. ಆದುದರಿಂದ, ಹಣ ಕೊಟ್ಟು ಜಾಗ ಪಡೆದುಕೊಂಡು ವ್ಯವಸ್ಥಿತವಾದ ಬಸ್ ನಿಲ್ದಾಣವನ್ನು ಮಾನ್ಯ ಸಚಿವರು ಕಟ್ಟಿಸಿಕೊಡಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಹಿರಿಯ ಸದಸ್ಯರಾದ ಸಿಂಧ್ಯರವರು ಮಾಜಿ ಸಾರಿಗೆ ಮಂತ್ರಿಗಳಾಗಿದ್ದು, ಅವರ ಜಾಗದಲ್ಲಿ ನಾನು ಇವೊತ್ತು ಕುಳಿತಿದ್ದೇನೆ. ಅವರು ಮೂರು ಬಾರಿ ಏನು ಉತ್ತರ ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ಆದುದರಿಂದ, ಅವರಿಗೂ (ಅಧ್ಯಕ್ಷರಿಗೂ) ನನಗೂ ಗೌರವ ಬರುವಂತೆ ತಾವು (ಸಿಂಧ್ಯ) ಹೇಳಿರುವಂಥ ಕೆಲಸವನ್ನು ನಾನು ಮಾಡುತ್ತೇನೆ.

ಆನೇಕಲ್‌ನ ಬಸ್ ನಿಲ್ದಾಣ ನಿರ್ಮಾಣ

1161(948) ಶ್ರೀ ನಾರಾಯಣಸ್ವಾಮಿ ಎ. (ಆನೇಕಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅನೇಕಲ್ ನಗರದಲ್ಲಿ ಬಸ್ ನಿಲ್ದಾಣ ನಿರ್ಮಿಸಿ ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಅಪೂರ್ಣಗೊಳ್ಳಲು ಕಾರಣಗಳೇನು?

ಇ) ಅಪೂರ್ಣಗೊಂಡಿರುವ ಬಸ್ ನಿಲ್ದಾಣಕ್ಕೆ ಡಾಂಬರ್ ಮತ್ತು ಶೆಲ್ಟರ್‌ಗಳನ್ನು ಸಾರಿಗೆ ಸಂಸ್ಥೆಯವರು ನಿರ್ಮಿಸಲು ಉದ್ದೇಶಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಉದ್ದೇಶಿತ ಕಾಮಗಾರಿಗಳ ಅಂದಾಜು ಮೊತ್ತ ಎಷ್ಟು?

ಈ) ಅಂದಾಜು ಮೊತ್ತ ಮಂಜೂರಾಗಿದ್ದರೂ ಸಹ ಕಾಮಗಾರಿಗಳನ್ನು ಪ್ರಾರಂಭಿಸದಿರಲು ಕಾರಣಗಳೇನು?

ಉ) ಸದರಿ ಕಾಮಗಾರಿಗಳನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಸಿ.ಆರ್.ಸಗೀರ್ ಆಹ್ಮದ್ (ಸಾರಿಗೆ ಸಚಿವರು) :

ಅ) ಹೌದು

ಆ) ಸಂಸ್ಥೆಯ ಆರ್ಥಿಕ ಪರಿಸ್ಥಿತಿಯಿಂದಾಗಿ ಬಾಕಿ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ.

ಇ) ಹೌದು

ರೂ. 18. 30 ಲಕ್ಷಗಳು

ಈ) ಸಂಸ್ಥೆಯ ಆರ್ಥಿಕ ಪರಿಸ್ಥಿತಿಯಿಂದಾಗಿ ಕೈಗೊಂಡಿರುವುದಿಲ್ಲ.

ಉ) ಪ್ರಸಕ್ತ ಸಾಲಿನಲ್ಲಿ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯ ಅನುಗುಣವಾಗಿ ಕೆಲಸವನ್ನು ಪ್ರಾರಂಭಿಸಲು ಕ್ರಮ ಜರುಗಿಸಲಾಗುವುದು.

ಶ್ರೀ ಎ.ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೆ ನನ್ನ ಆ ಪ್ರಶ್ನೆಗೆ ಉತ್ತರವಾಗಿ 'ಹೌದು' ಎಂದು ತಿಳಿಸಿದ್ದಾರೆ. ಸಂತೋಷ, ಬಸ್ ನಿಲ್ದಾಣ ನಿರ್ಮಿಸುವುದೇನೆಂದರೆ, ಅಂಗಡಿ ಹಾಗೂ ಹೋಟೆಲ್‌ಗಳನ್ನು ಕಟ್ಟಿಕೊಳ್ಳುವುದು ಎಂಬಂತಾಗಿದೆ. ಇದನ್ನು ತಾವು ಬಸ್ ನಿಲ್ದಾಣವೆಂದು ತೀರ್ಮಾನ ಮಾಡುವುದಾದರೆ ಬಹಳ ಸಂತೋಷ! ಅಪೂರ್ಣಗೊಂಡಿರುವ ಸದರಿ ಬಸ್ ನಿಲ್ದಾಣವನ್ನು ಮಾನ್ಯ ಸಾರಿಗೆ ಸಚಿವರು ಉದ್ಘಾಟಿಸಿ ಐದು ವರ್ಷಗಳೇ ಕಳೆದಿವೆ. ಹೀಗಿದ್ದರೂ ಅಲ್ಲಿ ಅಂಗಡಿ ಗಳನ್ನು ಮತ್ತು ಒಂದು ಹೋಟೆಲ್‌ನ್ನು ಕಟ್ಟಿಕೊಂಡಿದ್ದು, ಹೋಟೆಲ್ ಉಪಯೋಗಕ್ಕೆ ಬಾರದಿದ್ದುದರಿಂದ ಹರಾಜು ಹಾಕಲಾಗಿದೆ. ಮೂರನೇ ಪ್ರಶ್ನೆಗೆ ಉತ್ತರವಾಗಿ ರೂಪಾಯಿ 18 ಲಕ್ಷ 30 ಸಾವಿರದ ಅಂದಾಜು ಮೊತ್ತ ತಯಾರಾಗಿರಬೇಯೆಂದು, ಹಾಗೂ ಮತ್ತೊಂದು ಪ್ರಶ್ನೆಗೆ ಆರ್ಥಿಕ ಪರಿಸ್ಥಿತಿ ಸರಿಯಿಲ್ಲವೆಂದು, ಆರ್ಥಿಕ ಪರಿಸ್ಥಿತಿಯ ಅನುಗಣವಾಗಿ ನಿರ್ಮಾಣ ಮಾಡುವ ಪ್ರಯತ್ನ ಮಾಡಲಾಗುವುದೆಂದು ತಿಳಿಸಿದ್ದಾರೆ. ಇಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಜಾಗದ ಆಸ್ತಿಯನ್ನು ಪುರಸಭೆಯವರು ಕೇವಲ ಎರಡೂವರೆ ಲಕ್ಷ ರೂಪಾಯಿಗಳಿಗೆ ಕೊಟ್ಟಿದ್ದಾರೆ. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಈ ಕೆ ಎಸ್ ಆರ್ ಟಿಸಿ ಬಸ್ ನಿಲ್ದಾಣದಿಂದ ದಿನಪೊಂದಕ್ಕೆ

ಸಂಸ್ಥೆಗೆ ಮೂರೂವರೆ ಲಕ್ಷ ರೂಪಾಯಿಗಳಷ್ಟು ಆದಾಯ ಬರುತ್ತಿದೆ. ಇಡೀ ಬೆಂಗಳೂರು ಜಿಲ್ಲೆಯಲ್ಲಿಯೇ ಹೆಚ್ಚು ಆದಾಯ ಬರುತ್ತಿರುವಂಥ ಬಸ್ ನಿಲ್ದಾಣ ಇದಾಗಿದ್ದು, ಇಲ್ಲಿಂದ ಪ್ರತಿ ದಿವಸ 77 ಷೆಡ್ಯೂಲ್‌ಗಳಿದ್ದು, ಸುಮಾರು 28 ಸಾವಿರ ಕಿಲೋಮೀಟರ್‌ಗಳಷ್ಟು ದೂರ ಬಸ್ಸುಗಳು ಕ್ರಮಿಸುತ್ತಿವೆ. ಕಳೆದ ಐದು ವರ್ಷಗಳಿಂದಲೂ ಅಪೂರ್ಣಗೊಂಡಿರುವ ಈ ಬಸ್ ನಿಲ್ದಾಣಕ್ಕೆ ಡಾಂಬರೀಕರಣ, ಶೌಚಾಲಯ ಹಾಗೂ ಶೆಲ್ಟರ್‌ಗಳನ್ನು ಕಟ್ಟಿಸಿಕೊಡುವ ಕೆಲಸವಾಗಿಲ್ಲ. ಸದರಿ ವ್ಯವಸ್ಥೆಗಳನ್ನು ಯಾವಾಗ ನಿರ್ಮಿಸಿಕೊಡುತ್ತೀರಿ? ಇದರ ಜೊತೆಗೆ ಬಸ್ ನಿಲ್ದಾಣಕ್ಕಾಗಿ ಪುರಸಭೆಯವರು ನೀಡಿರುವ ಜಾಗಕ್ಕೆ ನೀವು ಇನ್ನೂ ಸಾಲ ಕಟ್ಟುವುದಕ್ಕಾಗಿಲ್ಲ, ಇದನ್ನು ಯಾವಾಗ ತೀರಿಸುತ್ತೀರಿ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಸದರಿ ಬಸ್ ನಿಲ್ದಾಣದ ಅಭಿವೃದ್ಧಿ ಬಗ್ಗೆ ಬೇಡಿಕೆ ಇಟ್ಟಿದ್ದು, ಅವರು ಕೇಳಿರುವಂಥ ಪ್ರಶ್ನೆಗಳಿಗೆ ನಾವು ಉತ್ತರ ಗಳನ್ನು ಒದಗಿಸಿಕೊಟ್ಟಿದ್ದು, ಈಗ ಸುಮಾರು ಹದಿನೆಂಟೂವರೆ ಲಕ್ಷ ರೂಪಾಯಿಗಳಷ್ಟು ಹಣವನ್ನು ವೆಚ್ಚ ಮಾಡಿ ಬಸ್ ನಿಲ್ದಾಣವನ್ನು ನಿರ್ಮಿಸಿ, ಅದನ್ನು ಸುಸಜ್ಜಿತಗೊಳಿಸಿ ಅಲ್ಲಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಿಕೊಡುವ ಪ್ರಸ್ತಾವನೆ ನಮ್ಮ ಮುಂದಿರುವುರಿಂದ, ಈ ಕೆಲಸವನ್ನೂ ಪೂರೈಸುವಂಥ ಜವಾಬ್ದಾರಿ ನನ್ನ ಇಲಾಖೆ ಯದಾಗಿದ್ದು ಈ ತಕ್ಷಣ ಕೆಲಸ ಪ್ರಾರಂಭಿಸಿ ಪೂರೈಸುತ್ತೇವೆ.

ಶ್ರೀ ಎ. ನಾರಾಯಣಸ್ವಾಮಿ : ನನ್ನ ಕ್ಷೇತ್ರ ಭ್ರಾಂಕೈಲ್ ಅಲರ್ಜಿಗೆ ಬಹಳಷ್ಟು ಹೆಸರುವಾಸಿಯಾಗಿದ್ದು, ಅಪೂರ್ಣಗೊಂಡಿರುವ ಬಸ್ ನಿಲ್ದಾಣದಲ್ಲಿ ಡಾಂಬರೀಕರಣದ ವ್ಯವಸ್ಥೆಯಾಗಿಲ್ಲವಾದುದರಿಂದ ದಿನನಿತ್ಯವೂ ಬಸ್‌ಗಳ ಓಡಾಟದಿಂದ ಸಾಕಷ್ಟು ಧೂಳು ಏಳುತ್ತಿದ್ದು ಇದನ್ನು ಸೇವಿಸಿದ ಪ್ರಯಾಣಿಕರು ತಕ್ಷಣ ಭ್ರಾಂಕೈಲ್ ಅಲರ್ಜಿಗೆ ಒಳಗಾಗುವ ಸಂಭವವಿರುವುದರಿಂದ ಜನರ ಆರೋಗ್ಯದ ದೃಷ್ಟಿಯಿಂದ ಜರೂರಾಗಿ ಡಾಂಬರೀಕರಣ ವ್ಯವಸ್ಥೆ ಮಾಡಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಇದು ಎಷ್ಟು ದಿವಸಗಳ ಬೇಡಿಕೆಯೆಂಬುದು ನನಗೆ ಗೊತ್ತಾಗಿದ್ದು, ಮಾನ್ಯ ಸದಸ್ಯರು ಪ್ರಶ್ನೆ ಕೇಳುವುದರ ಮೂಲಕ ನನ್ನ ಮುಂದೆ ಪ್ರಸ್ತಾವನೆ ಇಟ್ಟಿರುವುದರಿಂದ ಅವರ ವಿಚಾರಕ್ಕೆ ತಕ್ಷಣ ಸ್ಪಂದಿಸಿ ಅಲ್ಲಿ ಅಗತ್ಯವಾಗಿ ಆಗಬೇಕಿರುವ ಕಾಮಗಾರಿಗಳನ್ನು ತಕ್ಷಣ ತೆಗೆದುಕೊಳ್ಳಲು ಕ್ರಮ ಕೈಗೊಳ್ಳುತ್ತೇನೆ.

ತೀರ್ಥಹಳ್ಳಿಯಲ್ಲಿ ಎ.ಪಿ.ಎಂ.ಸಿ.ಯಿಂದ ಉಪ ಮಾರುಕಟ್ಟೆ ರಚನೆ

115 (1226) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಶಿವಮೊಗ್ಗ ಎ.ಪಿ.ಎಂ.ಸಿ.ವತಿಯಿಂದ ತೀರ್ಥಹಳ್ಳಿಯಲ್ಲಿ ಉಪ ಮಾರುಕಟ್ಟೆ ರಚನೆಗೆ ಮಂಜೂರಾತಿ ನೀಡಲಾಗಿದೆಯೆ;

2) ಇದರ ಮೊತ್ತವೆಷ್ಟು?

3) ಈ ಹಣದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ;